# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು - 572 103

ದೂರವಾಣಿ : 0816-2254546, 0816-2255596, 0816-2255597 ಫ್ಯಾಕ್ಸ್ : 0816-2270719


ಸಂಖ್ಯೆ:ತುವಿ:ಶೈವಿ:ಸ್ನಾ.ಪ.ವೇ2020-21: /3798 ದಿನಾಂಕ: 17.02.2021

## ಅಧಿಸೂಚನೆ

**ವಿಷಯ :** 2020-21 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಎಂ.ಬಿ.ಎ., ಎಂ.ಸಿ.ಎ, ಎಂ.ಬಿ.ಎ - ಬಿಸಿನೆಸ್ ಅನಾಲಿಟಿಕ್ಸ್ ಮತ್ತು ಎಂ.ಬಿ.ಎ – ಟ್ರೈನಿಂಗ್ ಅಂಡ್ ಡೆವೆಲಪ್‌ಮೆಂಟ್ ಕೋರ್ಸ್‌ಗಳ ಶೈಕ್ಷಣಿಕ ವೇಳಾಪಟ್ಟಿ ಕುರಿತು.

**ಉಲ್ಲೇಖ :** 1) ಶೈಕ್ಷಣಿಕ ವೇಳಾಪಟ್ಟಿ ಸಮಿತಿ ಸಭೆಯ ದಿನಾಂಕ:16.02.2021
2) ಕಂಡಿಕೆ (161) ರಲ್ಲಿನ ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ 17.02.2021

****

2020-21ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಎಂ.ಬಿ.ಎ., ಎಂ.ಸಿ.ಎ, ಎಂ.ಬಿ.ಎ - ಬಿಸಿನೆಸ್ ಅನಾಲಿಟಿಕ್ಸ್ ಮತ್ತು ಎಂ.ಬಿ.ಎ– ಟ್ರೈನಿಂಗ್ ಅಂಡ್ ಡೆವೆಲಪ್‌ಮೆಂಟ್ ಕೋರ್ಸ್‌ಗಳ ಶೈಕ್ಷಣಿಕ ವೇಳಾಪಟ್ಟಿಯನ್ನು ಉಲ್ಲೇಖ (1) ರ ಸಮಿತಿಯ ವರದಿ ಹಾಗೂ ಉಲ್ಲೇಖ (2) ರ ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

### I ಮತ್ತು III ನೇ ಸೆಮಿಸ್ಟರ್ ಹಾಗೂ V ನೇ ಸೆಮಿಸ್ಟರ್

| ಕ್ರಮ ಸಂಖ್ಯೆ | ಶೈಕ್ಷಣಿಕ ವೇಳಾ ಪಟ್ಟಿ | ಒಂದನೇ ಸೆಮ್ | ಮೂರನೇ ಸೆಮ್ | ಐದನೇ ಸೆಮ್ |
|---|---|---|---|---|
| 01. | ಶೈಕ್ಷಣಿಕ ವರ್ಷ ಪ್ರಾರಂಭ ದಿನಾಂಕ | 04.01.2021 | 01.09.2020 (Online classes) | 01.09.2020 (Online classes) |
| 02. | ತರಗತಿಗಳ ಪ್ರಾರಂಭ ದಿನಾಂಕ | 08.01.2021 | 17.11.2020 (Offline classes) | 17.11.2020 (Offline classes) |
| 03. | ಪ್ರವೇಶಾತಿಗೆ ಕೊನೆಯ ದಿನಾಂಕ | - | 28.12.2020 | 28.12.2020 |
| 04. | ಪ್ರವೇಶ ಪಟ್ಟಿಗಳನ್ನು ತ್ರಿಪತಿಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 10.03.2021 | - | - |
| 05. | ತರಗತಿಗಳ ಮುಕ್ತಾಯ | 07.05.2021 | 16.03.2021 | 16.03.2021 |
| 06. | ರಜಾ ಅವಧಿ ಪ್ರಾರಂಭ ದಿನಾಂಕ | 08.05.2021 | 17.03.2021 | 17.03.2021 |
| 07. | ಪರೀಕ್ಷೆಗಳ ಪ್ರಾರಂಭ ದಿನಾಂಕ | 13.05.2021 | 24.03.2021 | 24.03.2021 |

### II ಮತ್ತು IV ನೇ ಸೆಮಿಸ್ಟರ್ ಹಾಗೂ VI ನೇ ಸೆಮಿಸ್ಟರ್

| ಕ್ರಮ ಸಂಖ್ಯೆ | ಶೈಕ್ಷಣಿಕ ವೇಳಾ ಪಟ್ಟಿ | ಎರಡನೇ ಸೆಮ್ | ನಾಲ್ಕನೇ ಸೆಮ್ | ಆರನೇ ಸೆಮ್ |
|---|---|---|---|---|
| 01. | ತರಗತಿಗಳ ಪ್ರಾರಂಭ ದಿನಾಂಕ | 31.05.2021 | 08.04.2021 | 08.04.2021 |
| 02. | ತರಗತಿಗಳ ಮುಕ್ತಾಯ ದಿನಾಂಕ | 30.09.2021 | 06.08.2021 | 06.08.2021 |
| 03. | ರಜಾ ಅವಧಿ ಪ್ರಾರಂಭ ದಿನಾಂಕ | 01.10.2021 | 13.08.2021 | 13.08.2021 |
| 04. | ಪರೀಕ್ಷೆಗಳ ಪ್ರಾರಂಭ ದಿನಾಂಕ | 11.10.2021 | 16.08.2021 | 16.08.2021 |

## ಸೂಚನೆಗಳು

1. ವಿಶ್ವವಿದ್ಯಾನಿಲಯದಿಂದ ಸಂಯೋಜನೆ ಪಡೆಯದ ಯಾವುದೇ ಕಾಲೇಜು ವಿದ್ಯಾರ್ಥಿಗಳನ್ನು ಕೋರ್ಸು/ವಿಷಯಗಳಿಗೆ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ ಮತ್ತು ಪಠ್ಯಕ್ರಮ ಹಾಗೂ ವಿನಿಯಮ ಅನುಮೋದನೆಗೊಳ್ಳದ ಕೋರ್ಸು/ವಿಷಯಗಳಿಗೆ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ.
2. ವಿದ್ಯಾರ್ಥಿಗಳ ಪ್ರವೇಶಾತಿಯನ್ನು ವಿನಿಯಮಕ್ಕನುಗುಣವಾಗಿ ಹಾಗೂ ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ವಯ ಪ್ರವೇಶ ಮಾಡಿಕೊಳ್ಳುವುದು ಸಂಬಂಧಿಸಿದ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ಕಾಲೇಜುಗಳ ಪ್ರಾಂಶುಪಾಲರು ಅಥವಾ ಸಂಸ್ಥೆಯ ಮುಖ್ಯಸ್ಥರ ಪೂರ್ಣ ಜವಾಬ್ದಾರಿಯಾಗಿರುತ್ತದೆ. ಮತ್ತು ನಿಯಮಗಳಿಗೆ ವಿರುದ್ಧವಾಗಿ ಮಾಡಿಕೊಳ್ಳಲಾಗುವ ಪ್ರವೇಶಾತಿಯು ಅಮಾನ್ಯವಾಗುತ್ತದೆ.
3. ಹೊರ ರಾಜ್ಯದಲ್ಲಿ ಸ್ನಾತಕ ಪದವಿ ಪೂರೈಸಿರುವ ಎಲ್ಲಾ ವಿದ್ಯಾರ್ಥಿಗಳು ಕಡ್ಡಾಯವಾಗಿ ಅರ್ಹತಾ ಪ್ರಮಾಣ ಪತ್ರಕ್ಕಾಗಿ ನಿಗದಿತ ನಮೂನೆಯೊಂದಿಗೆ ಅಂಕಪಟ್ಟಿಗಳು, ಕ್ಯುಮ್ಯೂಲೇಟಿವ್ ರೆಕಾರ್ಡ್ ಹಾಗೂ ಇತರೆ ಅವಶ್ಯ ದಾಖಲಾತಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸುವುದು. ಅರ್ಹತಾ ಪ್ರಮಾಣ ಪತ್ರ ಒದಗಿಸದ ಹೊರ ರಾಜ್ಯದ ವಿದ್ಯಾರ್ಥಿಗಳನ್ನು ಯಾವುದೇ ಕಾರಣಕ್ಕೂ ಪ್ರವೇಶಾತಿ ಮಾಡಿಕೊಳ್ಳತಕ್ಕದಲ್ಲ.

   ಹೊರ ದೇಶಗಳ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳುವಾಗ ಈ ಕೆಳಕಂಡ ದಾಖಲಾತಿಗಳನ್ನು ಪಡೆಯತಕ್ಕದ್ದು.
   a. ತುಮಕೂರು ವಿಶ್ವವಿದ್ಯಾನಿಲಯದಿಂದ ಪಡೆದ ಅರ್ಹತಾ ಪ್ರಮಾಣ ಪತ್ರ.
   b. ವಿದ್ಯಾರ್ಥಿಯ ವೀಸಾ
   c. ಸಕ್ಷಮ ಪ್ರಾಧಿಕಾರವು ನೀಡಿರುವ A.I.D.S. ಮುಕ್ತ ಪ್ರಮಾಣ ಪತ್ರ
4. a) ಅನ್ಯ ವಿಶ್ವವಿದ್ಯಾನಿಲಯದ ಸ್ನಾತಕ ಪದವಿ ಕೋರ್ಸುಗಳನ್ನು ಪೂರೈಸಿದ ಎಲ್ಲಾ ವಿದ್ಯಾರ್ಥಿಗಳು ಪ್ರವೇಶ ಸಂದರ್ಭದಲ್ಲಿ ವಲಸೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು.

   b) ಅನ್ಯ ವಿಶ್ವವಿದ್ಯಾನಿಲಯ/ಸ್ವಾಯತ್ತತೆ ಕಾಲೇಜಿನಿಂದ ಮೂರು ವರ್ಷಗಳ ಸ್ನಾತಕ ಪದವಿ ಕೋರ್ಸನ್ನು ಪೂರ್ಣಗೊಳಿಸದ ಯಾವುದೇ ವಿದ್ಯಾರ್ಥಿಯು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪ್ರವೇಶಾತಿ ಪಡೆಯಲು ಅರ್ಹನಲ್ಲ.
5. ವಿಶ್ವವಿದ್ಯಾನಿಲಯ/ರಾಜ್ಯ ಸರ್ಕಾರವು ನಿಗದಿಪಡಿಸಿರುವ ಪ್ರವೇಶಮಿತಿಗಿಂತ ಹೆಚ್ಚಾಗಿ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ. ಒಂದು ವೇಳೆ ಮಾಡಿಕೊಂಡಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ರ ಪ್ರಕರಣ 59(18) ರನ್ವಯ ಅಂತಹ ಪ್ರವೇಶಾತಿಯು ಅಮಾನ್ಯವಾಗುತ್ತದೆ.
6. ವಿದ್ಯಾರ್ಥಿಯು ಪ್ರವೇಶ ಪಡೆದಿರುವ ಕೋರ್ಸಿಗೆ ಸಂಬಂಧಿಸಿದ ವಿನಿಯಮ, ಕನಿಷ್ಠ ಹಾಜರಾತಿ ಮತ್ತು ಪರೀಕ್ಷಾ ಸ್ವರೂಪವನ್ನು ಪ್ರತಿ ವರ್ಷ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ಗಮನಕ್ಕೆ ತರುವುದು ಹಾಗೂ ಅನುಸರಣಾ ವರದಿಯನ್ನು ಪ್ರವೇಶ ಪಟ್ಟಿಯೊಂದಿಗೆ ಸಲ್ಲಿಸುವುದು.
7. ವಿಶ್ವವಿದ್ಯಾನಿಲಯದಿಂದ ಪೂರ್ವಾನುಮತಿ ಪಡೆಯದೇ ಯಾವುದೇ ವರ್ಗಾವಣೆ ಪ್ರವೇಶವನ್ನು ಮಾಡಿಕೊಳ್ಳತಕ್ಕದ್ದಲ್ಲ.
8. ಸ್ನಾತಕೋತ್ತರ ವಿಭಾಗ/ಕಾಲೇಜುಗಳು ಆಯಾ ವರ್ಷಗಳಲ್ಲಿ ನಿಗದಿಪಡಿಸುವ ಕೊನೆಯ ದಿನಾಂಕದೊಳಗೆ ಎಲ್ಲಾ ಪ್ರವೇಶಾತಿಗಳನ್ನು ಮಾಡಿಕೊಳ್ಳತಕ್ಕದ್ದು. ಯಾವುದೇ ಕಾರಣಕ್ಕೂ ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ. ಒಂದು ವೇಳೆ ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪ್ರವೇಶಾತಿ ಮಾಡಿಕೊಂಡಲ್ಲಿ ಅಂತಹ ಪ್ರವೇಶಾತಿಯು ಅಮಾನ್ಯವಾಗುತ್ತದೆ.
9. ಪ್ರಾಂಶುಪಾಲರು/ ಮುಖ್ಯಸ್ಥರು/ನಿರ್ದೇಶಕರು/ಸಂಸ್ಥೆಯ ಮುಖ್ಯಸ್ಥರು ಪ್ರವೇಶಾತಿ ಪಟ್ಟಿಯನ್ನು ಶುಲ್ಕ ಪಾವತಿ ರಶೀದಿಯೊಂದಿಗೆ **ದ್ವಿಪ್ರತಿಗಳಲ್ಲಿ ದಿನಾಂಕ: 10.03.2021 ರೊಳಗೆ ಮಾನ್ಯ ಕುಲಸಚಿವರು/ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸುವುದು.** ವಿಭಾಗದ ಮುಖ್ಯಸ್ಥರು / ಕಾಲೇಜಿನವರುಗಳಿಗೆ ಶೈಕ್ಷಣಿಕ ವಿಭಾಗವು ಸೂಚಿಸುವ ನಿಗದಿತ ದಿನಾಂಕದಂದು ಎಲ್ಲಾ ಅವಶ್ಯ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಒದಗಿಸುವುದು. ಪ್ರಾಂಶುಪಾಲರು/ಸಂಸ್ಥೆಯ ಮುಖ್ಯಸ್ಥರು ಪ್ರವೇಶಾತಿ ಪಟ್ಟಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಎಲ್ಲಾ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ವಿಶ್ವವಿದ್ಯಾನಿಲಯದ

ವಿನಿಯಮಗಳಿಗನುಗುಣವಾಗಿ ಮಾಡಿಕೊಳ್ಳಲಾಗಿದೆ ಎಂದು ದೃಢೀಕರಿಸುವುದು ಹಾಗೂ ಅನುಸರಣಾ ವರದಿಯನ್ನು ಅಧಿಸೂಚನೆಯ ಪ್ರಕರಣ 06 ರನ್ವಯ ಸಲ್ಲಿಸುವುದು.

10. ಶೈಕ್ಷಣಿಕ ವೇಳಾಪಟ್ಟಿಯನ್ನು ಎಲ್ಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಗಮನಕ್ಕೆ ತರುವುದು.
11. ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ಪ್ರಾಂಶುಪಾಲರು/ನಿರ್ದೇಶಕರು/ಸಂಸ್ಥೆಯ ಮುಖ್ಯಸ್ಥರುಗಳು ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಪ್ರವೇಶಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
12. ಶೈಕ್ಷಣಿಕ ವೇಳಾಪಟ್ಟಿಯಲ್ಲಿನ ಯಾವುದೇ ದಿನಾಂಕವು ರಜಾ ದಿನವೆಂದು ಘೋಷಿಸಲ್ಪಟ್ಟಲ್ಲಿ ಕಾರ್ಯಕ್ರಮಗಳು ಸದರಿ ದಿನಾಂಕದ ನಂತರದ ಕರ್ತವ್ಯದ ದಿನ ಪ್ರಾರಂಭಗೊಳ್ಳುತ್ತದೆ.

17/12

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1) **ಮುಖ್ಯಸ್ಥರು, ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ತು.ವಿ.ತು.**
2) **ಸಂಯೋಜಕರು, ಸ್ನಾತಕೋತ್ತರ ಎಂ.ಬಿ.ಎ - ಬಿಸಿನೆಸ್ ಅನಾಲಿಟಿಕ್ಸ್/ ಎಂ.ಬಿ.ಎ - ಟ್ರೈನಿಂಗ್ ಅಂಡ್ ಡೆವೆಲಪ್‌ಮೆಂಟ್ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**
3) **ಮುಖ್ಯಸ್ಥರು, ಸ್ನಾತಕೋತ್ತರ ಎಂ.ಸಿ.ಎ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**
4) **ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ತುಮಕೂರು**

**<u>ಪ್ರತಿಗಳು:</u>**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ಉನ್ನತ ಶಿಕ್ಷಣ ಇಲಾಖೆ, ಎಮ್ ಎಸ್ ಬಿಲ್ಡಿಂಗ್, ಬೆಂಗಳೂರು-560001.
2. ಕುಲಸಚಿವರು(ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಕುಲಸಚಿವರು, ಮೈಸೂರು/ಬೆಂಗಳೂರು/ಕರ್ನಾಟಕ/ಕುವೆಂಪು/ಮಂಗಳೂರು/ದಾವಣಗೆರೆ/ಕರ್ನಾಟಕ ಮಹಿಳಾ ವಿಶ್ವವಿದ್ಯಾನಿಲಯ.
4. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಬಿ ಆರ್ ಅಂಬೇಡ್ಕರ್ ವೀದಿ, ಬೆಂಗಳೂರು-560001
5. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ನಂ.16/ಡಿ, ದೇವರಾಜ ಅರಸು ಭವನ, 3ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು-560052
6. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಡೀನರು, ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
9. ಗ್ರಂಥಪಾಲಕರು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
10. ಎಲ್ಲಾ ವಿಭಾಗಗಳ ಉಪಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
11. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
12. ಎನ್.ಎಸ್.ಎಸ್. ಕೋ-ಆರ್ಡಿನೇಟರ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
13. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
14. ಕಚೇರಿ ಪ್ರತಿ